ಹಾಗಾಗಿ ಇದು ಆತ್ಮಹತ್ಯೆ ಅಲ್ಲವೆಂಬ ನಿರ್ಧಾರಕ್ಕೆ ಬಂದಿದ್ದೆ'.

'ಹಾಗಿದ್ದರೆ ಮೆಸೇಜುಗಳ ಗೊಂದಲವೇನು?'

'ಅದಕ್ಕೆ ಹೊಸ ಆಯಾಮವಿದೆ. ಹತ್ತು ಗಂಟೆಗೆ ಸಿಗೋಣ ಎಂದು ಪ್ರವೀಣ ಮೆಸೇಜು ಕಳಿಸಿ, ನಂತ್ರ ಕರೆ ಮಾಡಿ, ಎಂಟು ಗಂಟೆಗೆ ಬರಲು ಹೇಳಿದ್ದನೆಂಬುದು ತಮ್ಮಯ್ಯನ ಹೇಳಿಕೆ. ಆದರೆ ತಮ್ಮಯ್ಯನ ಮೊಬೈಲಿನಲ್ಲಿ ಆ ಸಂದೇಶವೇ ಇರಲಿಲ್ಲ. ಆಶ್ಚರ್ಯವೆಂದರೆ ಪ್ರವೀಣನ ಮೊಬೈಲಿನಲ್ಲೂ ಇರಲಿಲ್ಲ. ಒಬ್ಬ ವ್ಯಕ್ತಿ ಪ್ರವೀಣನ ಮೊಬೈಲಿನಲ್ಲಿ ಆತ ಕಳಿಸಿದ ಮೆಸೇಜನ್ನು ಡಿಲೀಟ್ ಮಾಡಿದೆ. ಅದು ನಿಸ್ಸಂಶಯವಾಗಿ ಮುತ್ತಪ್ಪ. ಹಾಗಿದ್ದರೆ ತಮ್ಮಯ್ಯನ ಮೊಬೈಲಿನಲ್ಲಿದ್ದ ಮೆಸೇಜು ಅಳಿಸಿದ್ದು ಯಾರು? ಹಾಗೇ, ತಮ್ಮಯ್ಯನ ಮೊಬೈಲಿನಿಂದ ಪ್ರವೀಣನಿಗೆ ರಾತ್ರಿ ಹತ್ತು ಗಂಟೆಗೆ ಬರುವಂತೆ ಮೆಸೇಜು ಕಳಿಸಿದ್ದು ಯಾರು? ಪ್ರವೀಣನ ಮೊಬೈಲಿನಲ್ಲಿದ್ದ ಮೆಸೇಜಿನ ಟೈಮ್ ನೋಡಿದೆ. ಅಪರಾಹ್ನ ಎರಡೂ ಐದಕ್ಕೆ. ತಮ್ಮಯ್ಯ ಆ ಹೊತ್ತಿನಲ್ಲಿ, ತ್ರಿಶಾಲಿಯ ಜೊತೆಯಲ್ಲಿದ್ದ. ಅಂದರೆ, ಮೆಸೇಜು ಕಳಿಸುವ ಸಾಧ್ಯತೆ ಆಕೆಗೆ ಮಾತ್ರ! ನಾನು ತುಸು ಮುತ್ತಪ್ಪ ಮತ್ತು ತ್ರಿಶಾಲಿಯರ ಮೊಬೈಲ್ ಕರೆ ವಿವರ ತರಿಸಿ ನೋಡಿದಾಗ ನನಗೇ ಆಘಾತವಾಯಿತು. ಆಕೆಯ ಬಳಿ ಇನ್ನೊಂದು ಚರವಾಣಿಯಿದ್ದು, ಅವರಿಬ್ಬರ ನಡುವೆ ಸಾಕಷ್ಟು ಸಂಭಾಷಣೆ ನಡೆಯುತ್ತಿತ್ತು ನಿತ್ಯ! ಅಲ್ಲಿಗೆ ಆಕೆಗೆ ಮುತ್ತಪ್ಪನೊಡನೆ ಸಂಬಂಧವಿರುವುದು ಸ್ಪಷ್ಟವಾಯಿತು. ನನ್ನೆಣಿಕೆಯಂತೆ, ಅವರಿಬ್ಬರೂ ಸೇರಿ, ಪ್ರವೀಣನನ್ನು ಮುಗಿಸಿ, ತಮ್ಮಯ್ಯನನ್ನು ಅದರ ಆರೋಪದಲ್ಲಿ ಜೈಲಿಗೆ ಕಳಿಸುವ ಸಂಚು ಹೂಡಿದ್ದಾರೆ!' ಕರಮಚಂದನ ವಿವರಣೆಯನ್ನು ನಾವು ಆಸಕ್ತಿಯಿಂದ ಆಲಿಸುತ್ತಿದ್ದೆವು. 'ಆದರೆ ಕೆಲವು ಅನುಮಾನಗಳಿವೆ. ಪ್ರವೀಣ ಮರಣ ಪತ್ರ ಏಕೆ ಬರೆದಿಟ್ಟ? ಹತ್ತು ಗಂಟೆಗೆ ಅಂತ ಸಮಯ ನಿಗದಿ ಮಾಡಿ, ಮತ್ತೆ ಎಂಟು ಗಂಟೆಗೆ ಏಕೆ ಹೋದ? ಮೆಸೇಜುಗಳನ್ನು ತಿರುವು ಮುರುವು ಮಾಡಿದ ಉದ್ದೇಶವೇನು? ಪ್ರವೀಣನ ಬದಲಿಗೆ ತಮ್ಮಯ್ಯನೇ ಕಳಿಸಿದ್ದ ಅನ್ನುವ ಭ್ರಮೆ ಹುಟ್ಟಿಸಿದ್ದು ಏಕೆ? ಕೊನೆಯ ಮುಖ್ಯ ಪ್ರಶ್ನೆ. ಪ್ರವೀಣ ತಾರಸಿಯ ಆ ನಿರ್ದಿಷ್ಟವಾದ ಜಾಗದಲ್ಲೇ ನಿಂತ? ಅಥವಾ ಮುತ್ತಪ್ಪನಿಗೆ ಆತ ಅಲ್ಲೇ ನಿಲ್ಲುತ್ತಾನೆ, ಅಲ್ಲಿಂದ ಆತನನ್ನು ಕೆಳಕ್ಕೆ ಎಳೆದು ಕೊಲ್ಲಬಹುದೆಂದು ಮೊದಲೇ ಗೊತ್ತಾಗಿದ್ದೆಂತು?'

'ಈ ಪ್ರಶ್ನೆಗಳಿಗೆ ಮುತ್ತಪ್ಪನೇ ಉತ್ತರ ಕೊಡಬೇಕು. ಆತನನ್ನು ಠಾಣೆಗೆ ಬರಲು ಹೇಳಿದ್ದೆ. ಅಗೋ ಅಲ್ಲಿ, ಆತನೇ ಬಂದ!' ತಕ್ಷಣ ಡಿಸೋಜ ಆತನನ್ನು ಬಂಧಿಸಿದ. ಮೊದಲಿಗೆ ಪ್ರತಿಭಟಿಸಿದರೂ, ಕರಮಚಂದನ ವಿವರಣೆ ಕೇಳಿದ ಮೇಲೆ ಆತ ತೆಪ್ಪಗಾದ. ನಮ್ಮ ಪ್ರಶ್ನೆಗಳಿಗೆ ಆತ ಉತ್ತರಿಸುತ್ತಾ ಹೇಳಿದ, 'ಮರಣ ಪತ್ರ ಬರೆಯಲು ಪ್ರವೀಣನಿಗೆ ನಾನೇ ಸೂಚಿಸಿದ್ದು, ಅದನ್ನು ತಮ್ಮಯ್ಯನಿಗೆ ಕಳಿಸಿ, ಆತ್ಮಹತ್ಯೆಯ ಬೆದರಿಕೆ ಹಾಕು. ಆಗ ಆತ ಭಯದಿಂದ ಹಣ ನೀಡಬಹುದು ಎಂದಿದ್ದೆ. ಪ್ರವೀಣ ಅದನ್ನು ವಾಟ್ಸಾಪ್ಪಿನಲ್ಲಿ ತಮ್ಮಯ್ಯನಿಗೆ ಕಳಿಸಿದ್ದ. ಆದರೆ ತಮ್ಮಯ್ಯ ಆ ಬೆದರಿಕೆಗೆ ಸೊಪ್ಪು ಹಾಕುವುದಿಲ್ಲವೆಂದು ತಿಳಿದಿತ್ತು. ಕೊನೆಗೆ ತಮ್ಮಯ್ಯನನ್ನು ಕೊಲೆ ಮಾಡುವ ಐಡಿಯಾ ಕೊಟ್ಟೆ. ಅದಕ್ಕಾಗಿ, ಮೊದಲಿಗೆ ಹತ್ತು ಗಂಟೆಗೆ ಬರಲು ಪ್ರವೀಣನ ಮೊಬೈಲಿನಿಂದ ಮೆಸೇಜು ಕಳಿಸಿದೆ. ನಂತರ ಆ ದಿನ ಕರೆ ಮಾಡಿ ಎಂಟು ಗಂಟೆಗೆ ಬರುವಂತೆ ಹೇಳಿಸಿದೆ. ತ್ರಿಶಾಲಿಯ ಸಹಾಯದಿಂದ, ತಮ್ಮಯ್ಯನ ಮೊಬೈಲಿನಿಂದ ಮೆಸೇಜು ಕಳಿಸುವ ವ್ಯವಸ್ಥೆ ಮಾಡಿದೆ. ಮೇಲು ನೋಟಕ್ಕೆ ತಮ್ಮಯ್ಯನೇ ಕರೆದದ್ದು ಎಂಬಂತೆ ಬಿಂಬಿಸಲು. ಎಂಟು ಗಂಟೆಗೆ ತಾರಸಿಯಿಂದ ಆತನನ್ನು ಕೆಳಕ್ಕೆ ಬೀಳಿಸಿದರೆ, ಪ್ರವೀಣನ ಮೇಲೆ ಅನುಮಾನ ಬಾರದು ಎಂದೆ. ತಮ್ಮಯ್ಯ ಅಕಸ್ಮಾತ್ತಾಗಿ ಬಿದ್ದ ಎಂದು ಪೊಲೀಸರು ಭಾವಿಸುವರೆಂದು ಪ್ರವೀಣನಿಗೆ ಮನದಟ್ಟು ಮಾಡಿದೆ. ಅದಕ್ಕಾಗಿ, ನಾನು ಕೆಳಗಿನ ಮನೆಯ ಛಾವಣಿಯಲ್ಲಿ ನಿಂತು ಸಹಾಯ ಮಾಡ್ತೀನಿ ಅಂದಿದ್ದೆ. ಹೇಗಾದರೂ ಮಾಡಿ, ತಮ್ಮಯ್ಯನು ತಾರಸಿಯ ಕಟಕಟೆಯ ಸನಿಹ ನಿಲ್ಲುವಂತೆ ಮಾಡು ಎಂದಿದ್ದೆ. ಆದರೆ ನನ್ನ ನಿಜ ಉದ್ದೇಶವಿದ್ದುದು ಪ್ರವೀಣನನ್ನು ಮುಗಿಸುವುದು. ಕೊಲೆಯ ಆರೋಪ ತಮ್ಮಯ್ಯನ ಮೇಲೆ ಬರುತ್ತೆ. ನಾನು ಪಾರಾಗುತ್ತೇನೆ ಎಂದು ತರ್ಕಿಸಿದೆ. ಅದಕ್ಕಾಗಿ ನನ್ನ ಪ್ರೇಯಸಿ ತ್ರಿಶಾಲಿಗೆ ತಮ್ಮಯ್ಯನೊಡನೆ ಸ್ನೇಹ ಬೆಳೆಸಲು ಸೂಚಿಸಿದೆ.' ಮುತ್ತಪ್ಪನೊಡನೆ ತ್ರಿಶಾಲಿಯೂ ಕೊಲೆಗೆ ಸಹಕರಿಸಿದ್ದಕ್ಕಾಗಿ ಬಂಧಿಸಲ್ಪಟ್ಟಳು. ಅಲ್ಲಿಗೆ ಪ್ರೇಮ ಪ್ರಕರಣವೊಂದು ಪತನ ಕಂಡಿತ್ತು!

•